ಬಿಡಿಎಸ್‌ಗೆ ಬ್ರಿಡ್ಜ್ ಕೋರ್ಸ್ ಪ್ರಸ್ತಾಪಿಸಿದ ನೀತಿ ಆಯೋಗ | ವೈದ್ಯರ ಕೊರತೆ ನಿವಾರಣೆಗೆ ಕ್ರಮ

# ದಂತ ವೈದ್ಯರಿಂದ ಇನ್ನು ಸರ್ವ ಚಿಕಿತ್ಸೆ

**ನವದೆಹಲಿ:** ದೇಶದಲ್ಲಿ ಕ್ಷೀಣಿಸುತ್ತಿರುವ ವೈದ್ಯರ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನೀತಿ ಆಯೋಗ ಮಹತ್ವದ ಕ್ರಮವೊಂದನ್ನು ಪ್ರಸ್ತಾಪಿಸಿದೆ. ಈಗಾಗಲೇ ದಂತ ವೈದ್ಯರಾಗಿರುವವರು ಒಂದು ಪ್ರತ್ಯೇಕ ಕೋರ್ಸ್ ಮಾಡಿ ಎಂಬಿಬಿಎಸ್‌ಗೆ ಸಮಾನ ಅರ್ಹತೆ ಪಡೆಯಬಹುದಾಗಿದ್ದು, ಇದರಿಂದಾಗಿ ಅವರು ಸಾಮಾನ್ಯ ವೈದ್ಯರಾಗಿಯೂ ಕೆಲಸ ಮಾಡಬಹುದಾಗಿದೆ. ಸಾಮಾನ್ಯವಾಗಿ ಎಂಬಿಬಿಎಸ್ ಮತ್ತು ಬಿಡಿಎಸ್ ವ್ಯಾಸಂಗ ಮಾಡುವವರಿಗೆ ಮೊದಲ ಮೂರು ವರ್ಷಗಳಲ್ಲಿ ಒಂದೇ ರೀತಿಯ ಪಠ್ಯಕ್ರಮ ಇರುತ್ತದೆ. ಹೀಗಾಗಿ ಬ್ರಿಡ್ಜ್ ಕೋರ್ಸ್ ರೂಪಿಸುವುದು ಸುಲಭ ಎಂದು ನೀತಿ ಆಯೋಗ ಹೇಳಿದೆ. ಈ ಸಂಬಂಧ ಏಪ್ರಿಲ್ 9 ರಂದು ಆಯೋಗ ಪ್ರಸ್ತಾಪ ಮಾಡಿದ್ದು, ಕೇಂದ್ರ ಗೃಹ ಸಚಿವಾಲಯವು ಈ ಬಗ್ಗೆ ಪರಿಶೀಲನೆ ನಡೆಸುತ್ತಿದೆ. ಈ ಬಗ್ಗೆ 'ದ ಟೈಮ್ಸ್ ಆಫ್ ಇಂಡಿಯಾ' ವರದಿ ಮಾಡಿದೆ.

ಇನ್ನೊಂದೆಡೆ ಭಾರತೀಯ ದಂತ ವೈದ್ಯಕೀಯ ಸಮಿತಿ ಹಾಗೂ ವೈದ್ಯಕೀಯ ಸಮಿತಿ ಕೂಡ ಈ ಬಗ್ಗೆ ಪರಿಶೀಲನೆ ನಡೆಸಿದ್ದು ಸಮ್ಮತಿ ನೀಡಿದೆ. ಆದರೆ ಇದಕ್ಕೆ ಭಾರತೀಯ ವೈದ್ಯರ ಸಂಘ ಆಕ್ಷೇಪ ವ್ಯಕ್ತಪಡಿಸಿದೆ. ಕಳೆದ ವರ್ಷ ಆಯುಷ್ ವೈದ್ಯರಿಗೆ ಇದೇ ರೀತಿಯ ಬ್ರಿಡ್ಜ್ ಕೋರ್ಸ್ ಅನ್ನು ಪ್ರಸ್ತಾಪ ಮಾಡಲಾಗಿತ್ತು. ಆದರೆ ಇದಕ್ಕೆ ವೈದ್ಯರ ಸಂಘದ ಆಕ್ಷೇಪದಿಂದಾಗಿ ಆಗ ದಂತ ವೈದ್ಯಕೀಯ ಬ್ರಿಡ್ಜ್ ಕೋರ್ಸ್ ಪ್ರಸ್ತಾಪವನ್ನು ಕೈಬಿಡಲಾಗಿತ್ತು.

2016ರಿಂದಲೂ ದೇಶದ ದಂತ ವೈದ್ಯರು ಈ ಬಗ್ಗೆ ಮನವಿ ಸಲ್ಲಿಸುತ್ತಿದ್ದಾರೆ. ಆದರೆ ಈ ಬಗ್ಗೆ ಸರ್ಕಾರ ಯಾವುದೇ ನಿರ್ಧಾರವನ್ನು ಕೈಗೊಂಡಿರಲಿಲ್ಲ. ಈಗ ವೈದ್ಯರ ಕೊರತೆಯೂ ಇರುವುದರಿಂದಾಗಿ ನೀತಿ ಆಯೋಗ ಶಿಫಾರಸು ಮಾಡಿದೆ. ಆರೋಗ್ಯ ಸಚಿವಾಲಯ ಸಮ್ಮತಿ ನೀಡಿದ ನಂತರದಲ್ಲಿ ಈ ಸಂಬಂಧ ರೂಪುರೇಷೆ ಸಿದ್ಧವಾಗಲಿದೆ. ಸೋಮವಾರ ವೈದ್ಯಕೀಯ ಸಂಘಗಳು ಮತ್ತೊಂದು ಸುತ್ತಿನ ಮಾತುಕತೆ ನಡೆಸಲಿದ್ದು, ಆಗ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆಯಿದೆ.

**ಅನುಕೂಲ:** ಈ ಬ್ರಿಡ್ಜ್ ಕೋರ್ಸ್ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ದಂತ ವೈದ್ಯರಿಗೆ ನೆರವಾಗಲಿದೆ. ಇವರು ಮೂರು ವರ್ಷಗಳ ಈ ಕೋರ್ಸ್ ಮಾಡಿಕೊಂಡು ಸಾಮಾನ್ಯ ವೈದ್ಯರಂತೆ ಕಾರ್ಯನಿರ್ವಹಿಸಬಹುದು. ಇದರಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ಸುಲಭ ಲಭ್ಯವಾಗುತ್ತದೆ ಎನ್ನಲಾಗಿದೆ.

## 3 ವರ್ಷಗಳ ಕೋರ್ಸ್

**ಈ ಪ್ರಸ್ತಾಪಕ್ಕೆ ಆರೋಗ್ಯ ಇಲಾಖೆ ಸಮ್ಮತಿಸಿದರೆ 3 ವರ್ಷಗಳ ಬ್ರಿಡ್ಜ್ ಕೋರ್ಸ್ ಅನ್ನು ಪರಿಚಯಿಸಲಾಗುತ್ತದೆ. ಇದರಿಂದ ಈಗಾಗಲೇ ಬಿಡಿಎಸ್ ಓದಿದವರು ಮೂರು ವರ್ಷಗಳ ಬ್ರಿಡ್ಜ್ ಕೋರ್ಸ್ ಮಾಡಿ ಸಾಮಾನ್ಯ ವೈದ್ಯರಂತೆ ಕಾರ್ಯನಿರ್ವಹಿಸಬಹುದು. ಪ್ರವೇಶ ಪರೀಕ್ಷೆ ಅಥವಾ ಬಿಡಿಎಸ್‌ನಲ್ಲಿ ಗಳಿಸಿದ ಅಂಕಗಳನ್ನು ಆಧರಿಸಿ ಪ್ರವೇಶಾತಿ ಮಾಡಿಕೊಳ್ಳಲಾಗುತ್ತದೆ. ಶೇ. 50ರಷ್ಟು ಬಿಡಿಎಸ್ ಅಂಕ ಮತ್ತು ಶೇ. 50 ರಷ್ಟು ಪ್ರವೇಶ ಪರೀಕ್ಷೆ ಅಂಕಗಳನ್ನು ಪರಿಗಣಿಸಲಾಗುತ್ತದೆ. ಎಂಬಿಬಿಎಸ್ ಕೋರ್ಸ್‌ಗೆ ಎಂಸಿಐ ಶಿಫಾರಸು ಮಾಡಿದ ಪಠ್ಯಕ್ರಮವನ್ನೇ ಈ ಕೋರ್ಸ್‌ಗೆ ಅಳವಡಿಸಲಾಗುತ್ತದೆ.**